**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.18/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಉಮೇಶ್ ರಾಜ್ ಅರಸ್ | ಸಿ.ಡಬ್ಲ್ಯೂಃ | ಪಿ.ಡಬ್ಲ್ಯೂಃ1 |
| ತಂದೆಯ ಹೆಸರು | ಃ ಹಿರಿಯಣ್ಣರಾಜ್ | | |
| ವಯಸ್ಸು | ಃ 59 ವರ್ಷ | | |
| ಉದ್ಯೋಗ | ಃ ಎ.ಎಸ್.ಐ, ಸಂಚಾರಿ ಪೊಲೀಸ್ ಠಾಣೆ, ಚಿಕ್ಕಮಗಳೂರು | | |
| ವಾಸಸ್ಥಳ | ಃ ಚಿಕ್ಕಮಗಳೂರು | | |

ದಿನಾಂಕಃ 15.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ )**

1. ನಾನು ದಿಃ 13.07.2022 ರಿಂದ ದಿಃ 08.08.2022 ರವರೆಗೆ ಬಣಕಲ್ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 26.07.2022 ರಂದು ಈ ಪ್ರಕರಣದಲ್ಲಿ ಆರೋಪಿ ರಾಘವೇಂದ್ರ ಬಿನ್ ನಾರಾಯಣ, ಚನ್ನಪಟ್ಟಣ ರೈಲ್ವೆ ಗೇಟ್, ಹಾಸನ ರವರ ಇರುವಿಕೆಯ ಬಗ್ಗೆ ಪತ್ತೆ ಮಾಡಲು ನನ್ನನ್ನು ನೇಮಕ ಮಾಡಿರುವ ಮೇರೆಗೆ ದಿಃ 26.07.2022 ರಂದು ಹಾಸನಕ್ಕೆ ಹೋಗಿ ಸದರಿ ವಿಳಾಸದಲ್ಲಿ ವಿಚಾರ ಮಾಡಲಾಗಿ ಸದರಿ ಆರೋಪಿಯು 10 ವರ್ಷಗಳ ಹಿಂದೆ ಬಾಡಿಗೆ ಮನೆಯಲ್ಲಿ ಇದ್ದು ಬಿಟ್ಟು ಹೋಗಿರುವುದಾಗಿ ಸದರಿ ವಿಳಾಸದ ಆಸು ಪಾಸಿನವರು ತಿಳಿಸಿರುತ್ತಾರೆ. ನಂತರ ಆತನ ವಾಸ ಸ್ಥಳದ ದೃಢೀಕರಣದ ಬಗ್ಗೆ ಮಾಹಿತಿ ನೀಡುವಂತೆ ತಹಶೀಲ್ದಾರ್ ಹಾಸನ ರವರಿಗೆ ಅರ್ಜಿ ಕೊಟ್ಟಿರುತ್ತೇನೆ. ನಂತರ ಪೌರಾಯುಕ್ತರು ಹಾಸನರವರು ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ಮಾಹಿತಿ ನೀಡುವಂತೆ ಪತ್ರ ವ್ಯವಹಾರ ಮಾಡಿರುತ್ತೇನೆ. ನಂತರ ಆರೋಪಿಯು ವಾಸವಿದ್ದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಪಂಚರಾದ ಶ್ರೀನಿವಾಸ್

ಮತ್ತು ಸುವರ್ಣಮ್ಮ ರವರ ಸಹಿಯನ್ನು ಪಡೆದಿರುತ್ತೇನೆ. ಟಂ ಟಂ ಹೊರಡಿಸಿ ಉದ್ಘೋಷಣಾ ಪ್ರತಿಯನ್ನು ಆರೋಪಿಯು ವಾಸವಿದ್ದ ಮನೆಗೂ ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ಅಂಟಿಸಿ ಆರೋಪಿಯ ಇರುವಿಕೆಯ ಮಾಹಿತಿಯನ್ನು ಬಣಕಲ್ ಪೊಲೀಸ್ ಠಾಣೆಗೆ ತಿಳಿಸುವಂತೆ ಪಂಚರುದಾರರಿಗೆ ಮತ್ತು ಅಕ್ಕ ಪಕ್ಕದ ಮನೆಯವರಿಗೆ ತಿಳಿಸಿರುತ್ತೇನೆ. ಸದರಿ ಮಹಜರ್ ನ್ನು 16.00 ರಿಂದ 17.00 ಗಂಟೆ ವರೆಗೆ ಆರೋಪಿಯು ವಾಸವಾಗಿದ್ದ ಬಾಡಿಗೆ ಮನೆಯಲ್ಲಿ ಮಾಡಿರುತ್ತೇನೆ. ಸದರಿ ಸ್ಥಳದಲ್ಲಿ ಛಾಯಚಿತ್ರವನ್ನು ತೆಗೆದಿರುತ್ತೇನೆ. ನಗರ ಸಭೆಯಿಂದ ಆರೋಪಿಯ ಚರ ಮತ್ತು ಸ್ಥಿರ ಸ್ವತ್ತುಗಳ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ಅದೇ ರೀತಿ ತಹಶೀಲ್ದಾರ್ ಹಾಸನರವರಿಂದ ಆರೋಪಿಯ ವಾಸ ಸ್ಥಳದ ದೃಢೀಕರಣ ಪತ್ರದ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ನಂತರ ನಾನು ಚಿಕ್ಕಮಗಳೂರು ಸಂಚಾರಿ ಠಾಣೆಗೆ ವರ್ಗಾವಣೆಯಾಗಿರುತ್ತೇನೆ. ಈ ಪ್ರಕರಣದಲ್ಲಿ ನೀಡಿರುವ Proclamation ನ್ನು ನಿ.ಪಿ.1 ಎಂದು ಗುರುತಿಸಲಾಯಿತು, ಮಹಜರ್ ನ್ನು ನಿ.ಪಿ.2 ಎಂದು ಗುರುತಿಸಲಾಯಿತು, ದಿಃ 26.07.2022 ರಂದು ಪೌರಾಯುಕ್ತರು ನಗರ ಕಾರ್ಯಲಯ ಹಾಸನ ರವರಿಗೆ ನೀಡಿರುವ ಕೋರಿಕೆಯ ಪತ್ರ ನಿ.ಪಿ.3 ಎಂದು ಗುರುತಿಸಲಾಯಿತು, ದಿಃ 26.07.2022 ರಂದು ತಹಶೀಲ್ದಾರವರು ಹಾಸನ ರವರಿಗೆ ನೀಡಿರುವ ಕೋರಿಕೆ ಪತ್ರ ನಿ.ಪಿ.4 ಎಂದು ಗುರುತಿಸಲಾಯಿತು, ನಾನು ನ್ಯಾಯಾಲಯಕ್ಕೆ ನೀಡಿದ ನಿವೇದನೆ ಪ್ರತಿ ನಿ.ಪಿ.5 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿನಾಂಕಃ 22.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ )**

3. ಹಾಸನ ನಗರಸಭೆಯ ಪೌರಾಯುಕ್ತರು ದಿಃ 20.08.2022 ರಂದು ನೀಡಿದ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ